ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ
**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

# ಸುತ್ತೂರಿನಲ್ಲಿ 'ಕೈವಲ್ಯ ಕಲ್ಪವಲ್ಲರಿ'

**ಸುತ್ತೂರು, ಮೇ–12:** ಶ್ರೀ ಸರ್ಪಭೂಷಣ ಶಿವಯೋಗಿಗಳವರ **'ಕೈವಲ್ಯ ಕಲ್ಪವಲ್ಲರಿ'** ಗ್ರಂಥದ ವಿಚಾರಧಾರೆಯನ್ನು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ಆಧ್ಯಾತ್ಮಿಕ ಜಿಜ್ಞಾಸುಗಳಿಗೆ ಆಯೋಜಿಸಿರುವ ಅಧ್ಯಯನ ಶಿಬಿರವನ್ನು ಮಹಾಲಿಂಗಪುರದ ಶ್ರೀ ಸಿದ್ಧಾರೂಢ ಬ್ರಹ್ಮ ವಿದ್ಯಾಶ್ರಮದ ಶ್ರೋ. ಬ್ರ. ಶ್ರೀ ಸಹಜಾನಂದ ಸ್ವಾಮಿಗಳು ಉದ್ಘಾಟಿಸಿದರು.

ಹೇ ಗುರುವೆ ನಿನ್ನ ಪಾದಕಮಲಗಳು ನನ್ನ ಹೃದಯವೆಂಬ ಸರೋವರದಲ್ಲಿ ವಿಯೋಗವಾಗದೆ ನಿರಂತರವಾಗಿ ಇರಲಿ. ಮಾನವನ ಹೃದಯವು ಪವಿತ್ರವಾದ ಸ್ಥಾನವಾಗಿದೆ. ಅದುವೇ ಭಗವಂತನ ಸಾಕ್ಷಾತ್ಕಾರಕ್ಕೆ ಯೋಗ್ಯವಾದ ಸ್ಥಾನವಾಗಿದೆ. ಅಲ್ಲಿ ಕೇವಲ ವಿಷಯವಾಸನೆಗಳೆ ತುಂಬಿಕೊಂಡಿದ್ದರೆ, ಅದು ಜನನ ಮರಣ ರೂಪ ಬಂಧನಕ್ಕೆ ಕಾರಣವಾಗುತ್ತದೆ. ಅಲ್ಲಿ ಭಗವಂತನಿಗೆ ಸ್ಥಾನವಿಲ್ಲವಾಗಿ ಪರಮಾತ್ಮನ ಸಾಕ್ಷಾತ್ಕಾರವಾಗಲಾರದು. ಹೃದಯವೆಂಬ ಸರೋವರದಲ್ಲಿ ಸದಾ ಭಗವಂತನ ಪಾದಗಳ ಸ್ಮರಣೆ ಇರಲಿ ಎಂಬುದರ ಮಹತ್ವವನ್ನು ತಿಳಿಸಿದರು.

ಪ್ರೊ. ಕೆ. ಅನಂತರಾಮುರವರು, ಮಂತ್ರ, ತೀರ್ಥಕ್ಷೇತ್ರ, ವಿಪ್ರ, ದೇವರು, ಜ್ಯೋತಿಷಿ, ವೈದ್ಯ ಮತ್ತು ಗುರು ಇವರ ವಿಷಯದಲ್ಲಿ ಯಾವ ಬಗೆಯ ಶ್ರದ್ಧೆಯನ್ನು ಮಾಡಿರುವರೋ ಅಷ್ಟು ಪ್ರಮಾಣದಲ್ಲಿ ಅವರಿಗೆ ಸಿದ್ಧಿಯು ದೊರೆಯುತ್ತದೆ. ದೃಢವಾದ ಶ್ರದ್ಧೆಯಿಂದ ಮಂತ್ರವನ್ನು ಜಪಿಸಬೇಕು, ಅದರಿಂದ ಮುಕ್ತಿಯಾಗುತ್ತದೆ. ಇದಕ್ಕೆ ಮಂತ್ರಯೋಗವೆಂದು ಹೇಳುತ್ತಾರೆ ಎಂದು ತಿಳಿಸಿದರು.

ಪ್ರತಿದಿನ ಬೆಳಗ್ಗೆ ಪ್ರಾರ್ಥನೆಯ ನಂತರ ಶಿಬಿರಾರ್ಥಿಗಳು ಚಿಂತನ–ಮಂಥನ ನಡೆಸುವರು.




ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ಆಧ್ಯಾತ್ಮಿಕ ಜಿಜ್ಞಾಸುಗಳಿಗೆ ಆಯೋಜಿಸಿರುವ ಅಧ್ಯಯನ ಶಿಬಿರವನ್ನು ಮಹಾಲಿಂಗಪುರದ ಶ್ರೀ ಸಿದ್ಧಾರೂಢ ಬ್ರಹ್ಮ ವಿದ್ಯಾಶ್ರಮದ ಶ್ರೋ. ಬ್ರ. ಶ್ರೀ ಸಹಜಾನಂದ ಸ್ವಾಮಿಗಳು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಸ್ವಾಮಿ ಬುದ್ಧಿಯೋಗಾನಂದರು, ಶ್ರೀ ಶಿವಾನಂದಸ್ವಾಮಿಗಳು, ಕುದೇರುಮಠದ ಇಮ್ಮಡಿ ಗುರುಲಿಂಗ ಸ್ವಾಮಿಗಳು, ಪ್ರೊ. ಕೆ. ಅನಂತರಾಮು, ಮೈಸೂರಿನ ಹೊಸಮಠದ ಶ್ರೀ ಚಿದಾನಂದ ಸ್ವಾಮಿಗಳು ಹಾಗೂ ಇತರ ಶಿಬಿರಾರ್ಥಿಗಳನ್ನು ಕಾಣಬಹುದು.